ನಾಟಕವಾದರೂ ಇವರಿಗೆ ಮಹಿಳಾ ಪಾತ್ರಗಳೇ ಮೀಸಲಾಗಿದ್ದವು. ಸಣ್ಣ ಪಾತ್ರ ಕೊಟ್ಟರೂ ಅದನ್ನು ಪ್ರಮುಖ ಪಾತ್ರವನ್ನು ಸರಿಗಟ್ಟುವಂತೆ ಅಭಿನಯಿಸುವುದು ಸೀತಪ್ಪನವರಿಗೆ ಬಹಳ ಸಲೀಸು. ಇದಕ್ಕೆ ಉದಾಹರಣೆ ಮೋಹಶಾಸನೆ ಪಾತ್ರ. 'ಗುಲೇಬಕಾವಲಿ'ಯ ಮೂಲ ಉರ್ದು. ಇದನ್ನು ಕನ್ನಡಕ್ಕೆ ತಂದು ಅನೇಕ ಕಂಪನಿಗಳು ಪ್ರದರ್ಶಿಸುತ್ತಿದ್ದವು. ಇದರಲ್ಲಿ ಮೋಹಶಾಸನೆಯದು ಪೋಷಕ ಪಾತ್ರ. ಸೀತಪ್ಪ ತಮ್ಮ ಅಪೂರ್ವ ಅಭಿನಯದಿಂದ ನಾಯಕಿಯನ್ನು ಮೀರಿಸಿದರು. ಮೋಹಶಾಸನೆ ಪಾತ್ರಕ್ಕೆ ನಾಲ್ಕಾರು ಬಗೆಯ ಆಯಾಮಗಳನ್ನು ಕೊಟ್ಟ ಕೀರ್ತಿ ಅವರದು.

ಪುರುಷ ಪಾತ್ರಧಾರಿಗಳು ಸ್ತ್ರೀ ಪಾತ್ರಗಳನ್ನು ನಿರ್ವಹಿಸುವ ಹಾದಿಯನ್ನು ರೂಪಿಸಿದ ಸೀತಪ್ಪ ಹೊಸ ಸಾಹಸಕ್ಕೆ ಕೈ ಹಾಕಿದರು. ಅದು ಸ್ವಂತ ಕಂಪನಿ ಸ್ಥಾಪನೆ. ಜನಮೆಚ್ಚುಗೆ ಪಡೆದ ಕಲಾವಿದರು ಹೊಸ ನಾಟಕ ಸಂಘಗಳನ್ನು ಕಟ್ಟಿ ನಡೆಸುವುದು ಆಗ ಸಾಮಾನ್ಯ. ಸ್ತ್ರೀ ಪಾತ್ರಧಾರಿ ಸೀತಪ್ಪ ತಮ್ಮದೇ ಆದ 'ಸೀತಾ ಮನೋಹರಾ ಕರ್ನಾಟಕ ಮಂಡಲಿ'ಯನ್ನು ಆರಂಭಿಸಿದರು.

ಉತ್ತಮ ಕಂಠವಿದ್ದ ಸೀತಪ್ಪ ಗಾಯನದ ಜೊತೆಗೆ ವಿವಿಧ ವಾದ್ಯ ನುಡಿಸುವಲ್ಲಿಯೂ ನಿಪುಣರು. ಹಾರ್ಮೋನಿಯಂ ಅವರಿಗೆ ಅಚ್ಚುಮೆಚ್ಚು. ದೊಡ್ಡ ಕಂಪನಿಗಳಲ್ಲಿ ದುಡಿದ ಅನುಭವವಿತ್ತು. ಇವೆಲ್ಲ ಹಿನ್ನೆಲೆಯಿಂದ ಪ್ರಾರಂಭವಾದ ಸೀತಪ್ಪನವರ ಕಂಪನಿ ಬೀರಿದ ಪರಿಣಾಮವೂ ಚೆನ್ನಾಗಿತ್ತು. 'ರಾಮಾಂಜನೇಯ' ನಾಟಕ ಸೀತಪ್ಪನವರ ಕಂಪನಿಗೆ ಹೆಸರು ತಂದುಕೊಟ್ಟ ನಾಟಕಗಳಲ್ಲೊಂದು. ಆ ಕಾಲದಲ್ಲಿ ಖ್ಯಾತ ನಾಟಕಕಾರರೆಂದು ಪ್ರಸಿದ್ಧರಾಗಿದ್ದ ತೋರಣಗಲ್ ರಾಜಾರಾಯರು ಬರೆದ ನಾಟಕ 'ರಾಮಾಂಜನೇಯ'. ಇದು ಅಭಿನಯ– ಸಂಭಾಷಣೆ, ಗೀತ ಸಂಗೀತಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುವಂತಹ ನಾಟಕ. ಇದನ್ನು ಸಮರ್ಥವಾಗಿ ದುಡಿಸಿಕೊಂಡ ಸೀತಪ್ಪ ತಾವು ಚಾರುಮತಿ ಪಾತ್ರವನ್ನು ನಿರ್ವಹಿಸುವ ಮೂಲಕ ಕನ್ನಡ ರಂಗಭೂಮಿಗೆ ಹೊಸ ಹೊಳಪು ತಂದರು.

ಹೊಸ ಮುಖಗಳನ್ನು ರಂಗದ ಮೇಲೆ ತರುವಲ್ಲಿ ಹಾಗೂ ಅವರನ್ನು ಸತ್ವಶಾಲಿ ಕಲಾವಿದರನ್ನಾಗಿ ತಯಾರು ಮಾಡುವಲ್ಲಿ ಸೀತಪ್ಪ ಸಿದ್ಧ ಹಸ್ತರು. ಎಂ.ಎನ್. ಗಂಗಾಧರರಾವ್, ಎಂ.ವಿ. ಸುಬ್ಬಯ್ಯ ನಾಯ್ಡು, ಮಳವಳ್ಳಿ ಸುಂದರಮ್ಮ, ಕೆ. ಅಶ್ವತ್ಥಮ್ಮ, ಕೆ. ಹಿರಣ್ಣಯ್ಯ ಮೊದಲಾದ ಶ್ರೇಷ್ಠ ಕಲಾವಿದರನ್ನು ಸಿದ್ಧಗೊಳಿಸಿದ್ದು ಸೀತಪ್ಪನವರ ಹೆಗ್ಗಳಿಕೆ.

ತಮ್ಮ 'ಸೀತಾ ಮನೋಹರಾ ಕರ್ನಾಟಕ ಮಂಡಲಿ'ಯಿಂದ ಅನೇಕ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸುವುದರೊಂದಿಗೆ ಸಂಗೀತ– ನಟನೆಗಳಲ್ಲಿ ಹಲವು ಹೊಸ ಮುಖಗಳನ್ನು ಸೀತಪ್ಪ ಪರಿಚಯಿಸಿದರು. ಸೀರೆ ಉಡುವ ರೀತಿ, ಅಭಿನಯದಲ್ಲಿ ಲಾವಣ್ಯದ ಬಗೆ, ಸೌಂದರ್ಯಕ್ಕೆ ಆದ್ಯತೆ, ಹೀಗೆ ಪರಿಪೂರ್ಣ ಸ್ತ್ರೀ ಪಾತ್ರದಂತೆ ಅಭಿನಯಿಸಿ ಕಲಾ ರಸಿಕರನ್ನು ಸೆಳೆಯುತ್ತಿದ್ದ ಸೀತಪ್ಪ ತಮ್ಮ ಕಂಪನಿಯಲ್ಲಿ ಕಲಾವಿದರನ್ನು ತರಬೇತುಗೊಳಿಸುವಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಹೀಗಾಗಿ ಅವರ ಕಂಪನಿಯಲ್ಲಿ 25ಕ್ಕೂ ಹೆಚ್ಚು ಕಲಾವಿದರಿದ್ದರು.

ಸರಿಸುಮಾರು ಎರಡು ದಶಕಗಳ ಕಾಲ ಕಂಪನಿಯನ್ನು ಮುನ್ನಡೆಸಿದ ಸೀತಪ್ಪ ಲಾಭ ನಷ್ಟಕ್ಕಿಂತ ಗುಣಮಟ್ಟಕ್ಕೆ ಹಾಗೂ ಪ್ರೇಕ್ಷಕರ ತೃಪ್ತಿಗಾಗಿ ನಾಟಕಗಳನ್ನು ಪ್ರದರ್ಶಿಸಿದ್ದರು. ಕೊನೆಗೂ ಅವರು ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಕೊಳ್ಳಬೇಕಾಯಿತು. ಹಲವು ಕಲಾವಿದರಿಗೆ ಮಾರ್ಗದರ್ಶಕರೆನ್ನಿಸಿ ಕನ್ನಡ ವೃತ್ತಿ ರಂಗಭೂಮಿಯ ಶ್ರೇಷ್ಠ ಸ್ತ್ರೀ ಪಾತ್ರಧಾರಿಯಾಗಿ ಹೊರ ಹೊಮ್ಮಿದ್ದ ಸೀತಪ್ಪ ಸ್ವಪ್ರತಿಭೆಯಿಂದಲೇ ಬೆಳೆದ ರಂಗ ಕಲಾವಿದ.